(2) ಗೃಹಮಂಡಲಿಯಲ್ಲಿ ನಡೆದಿರುವಂಥ ಅವ್ಯವಹಾರಗಳ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :- ನಾನು ತಮ್ಮ ಕೊಠಡಿಗೆ ಬಂದಿದ್ದೆ. ತಮಗೆ ಗೊತ್ತಿರುವ ಹಾಗೆ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ನಿನ್ನೆ ಇಡೀ ದಿವಸ ನಾವು ಧರಣಿಯನ್ನು ಕುಳಿತಿದ್ದೆವು, ಉದ್ದೇಶ ಏನೆಂದರೆ ಗೃಹಮಂಡಳಿಯಲ್ಲಿ ನಡೆದಿರುವಂಥ ಎಲ್ಲಾ ಅವ್ಯವಹಾರಗಳ ಬಗ್ಗೆ ನನ್ನ ಹತ್ತಿರ ದಾಖಲುಗಳು ಇವೆ. ಸೈಟನ್ನು ಕೊಟ್ಟಿರುವುದು ಇರಬಹುದು, ಮನೆಗಳನ್ನು ಅಲಾಟ್ ಮಾಡಿದಂಥ ಸಂದರ್ಭದಲ್ಲಿ ಇರಬಹುದು. ಸುಮಾರು ನೂರು ಕೋಟಿ ರೂಪಾಯಿಗೂ ಹೆಚ್ಚು ಅವ್ಯವಹಾರಗಳು ನಡೆದಿರುವ ಬಗ್ಗೆ ದಾಖಲೆಗಳು ನನ್ನ ಹತ್ತಿರ ಇವೆ. ನಾನು ನಿಲುವಳಿಯ ಸೂಚನೆಯ ಮೂಲಕ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಇವತ್ತು ಯಾರೋ ಒಬ್ಬ ಕಂಟ್ರಾಕ್ಟರ್‌ರವರ ಮೇಲೆ ಆರೋಪ ಮಾಡಿರುವುದನ್ನು ನಾನು ತೆಗೆದುಕೊಂಡು ಮಾತನಾಡುತ್ತಿಲ್ಲ. ನನಗೂ ಜವಾಬ್ದಾರಿ ಇದೆ. ನಾವು ಮಾತನಾಡುತ್ತಿರುವಂಥದ್ದು ಸಿ.ಓ.ಡಿ.ಯ ಇಂಟರೀಮ್ ರಿಪೋರ್ಟ್ ಏನಿದೆ ಅದನ್ನು ಈ ಸದನದ ಮುಂದಿದೆ. ನನ್ನ ಹತ್ತಿರ ಅನೇಕ ದಾಖಲೆಗಳು ಇವೆ. ಕಂಟ್ರಾಕ್ಟರ್‌ದಾರರಿಗೆ ಬೋರ್ಡ್ ರೆಸಲ್ಯೂಷನ್ ಇಲ್ಲದೇ ದುಡ್ಡು ಕೊಡಿಸಿ ಎಂದು ಹೇಳಿ ಅಂದಿನ ಗೃಹಮಂಡಳಿಯ ಅಧ್ಯಕ್ಷರು ಸಹಿ ಮಾಡಿದಂತಹ ದಾಖಲೆಗಳು ನನ್ನ ಹತ್ತಿರ ಇವೆ.

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ಬರಲಿ, ನಂತರ ಚರ್ಚೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಒಬ್ಬ ಪಕ್ಷದ ಸದಸ್ಯನಾಗಿ, ಚುನಾಯಿತ ಜನರ ಸದಸ್ಯನಾಗಿ ಈ ಜನರಿಗೆ ಅನ್ಯಾಯವಾಗುತ್ತಿದೆ ಅಂತ ಪ್ರಸ್ತಾಪ ಮಾಡಿದಾಗ ಸರ್ಕಾರ ಎದ್ದು ನಿಂತುಕೊಂಡು ಇಂಟರೀಮ್ ರಿಪೋರ್ಟ್ ನಮ್ಮ ಹತ್ತಿರ ಬಂದಿದೆಯೊ ಅಥವಾ ಇಲ್ಲವೋ ಅಂತ ಹೇಳಿ ಅದನ್ನು ಈ ಸದನದಲ್ಲಿ ಇಡುವುದಕ್ಕೆ ಅವರು ಏತಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ? ಇದನ್ನು ಹೇಳಬೇಕಲ್ಲ ! ನಿನ್ನೆ ಪತ್ರಿಕೆಯಲ್ಲಿ ಬಂದಿರುವ ಹಾಗೆ ನನ್ನ ಆರೋಪ ಕಾಗೋಡು ತಿಮ್ಮಪ್ಪನವರ ಮೇಲೆ ಅಲ್ಲ. ಗೃಹಮಂಡಲಿಯ ಅಧ್ಯಕ್ಷರು, ಅಧಕ್ಷರಾಗಿ ಮಾಡಿದಂತಹ ಮನೆ ಅಲಾಟ್ ಮಾಡಿದಂತದ್ದು ಇರಬಹುದು. ಸೈಟ್ ಕೊಟ್ಟಂಥಾದ್ದು ಇರಬಹುದು. ಆ ಒಂದು ಬೋರ್ಡ್ ರೆಸಲ್ಯೂಷನ್ ಆಗದೆ ಇಂಥಹವರಿಗೆ ಅಡ್ವಾನ್ಸ್ ಅನ್ನು ಕೊಡಿ ಎಂದು ಅವರೇ ಲಿಖಿತ ಮೂಲಕ ಸಹಿ ಮಾಡಿ ಸೆಕ್ರೆಟರಿಗೆ ಕಳುಹಿಸಿರುವಂತಹ ದಾಖಲೆಗಳು ನನ್ನ ಹತ್ತಿರ ಇವೆ. ಅದಕ್ಕೋಸ್ಕರ ಸರ್ಕಾರ ಹೇಳಬೇಕು.

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ಬರಲಿ, ಆಮೇಲೆ ತಾವು ಚರ್ಚೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇಲ್ಲ ಮಾನ್ಯ ಯಡಿಯೂರಪ್ಪನವರೇ, ನೀವು ಪ್ರಸ್ತಾಪ ಮಾಡುತ್ತಿರುವಂಥದ್ದು ಕಾನೂನುಬಾಹಿರವಾಗಿದೆ. ಪ್ರಸ್ತಾಪ ಮಾಡುವಂತಹ ಅಗತ್ಯವಿಲ್ಲ ಅಂತ ಹೇಳಿದರೆ ನಾನು ಹೊರಗಡೆ ಹೋಗುತ್ತೇನೆ. ನಿಮ್ಮ ಮನಸ್ಸಿಗೆ ನೋವು ಮಾಡಬೇಕೆಂದು ನನಗೆ ಇಚ್ಛೆ ಇಲ್ಲ. ನಿನ್ನೆಯ ದಿವಸ ಮಾನ್ಯ ಕಾಗೋಡು ತಿಮ್ಮಪ್ಪನವರು Law of the Land ಏನಿದೆ ಈ ನೆಲದ ಕಾನೂನು ಏನಿದೆ. ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳಿದರು.

(ಗೊಂದಲ)

ಅಧ್ಯಕ್ಷರು:- ಮುಖ್ಯಮಂತ್ರಿಗಳು ಬಂದ ನಂತರ ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಬಡವರಿಗೆ ಸೇರಿದಂತಹ ಮನೆಯನ್ನು ಕಟ್ಟಿಕೊಡುವ ಕೆಲಸದ ಪ್ರಗತಿ ಒಂದು ವರ್ಷ ಹಿಂದೆ ಬಿದ್ದಿದೆ. ಇವತ್ತು ಮಾನ್ಯ ನಾಗರಾಜ್ ಅನ್ನುವವನು ಹೇಳಿಕೆಯನ್ನು ಕೊಟ್ಟಿದ್ದಾನೆ. 5.5

ಕೋಟಿ ರೂಪಾಯಿಯಲ್ಲಿ ಸುಮಾರು ಮೂರು ಕೋಟಿ ರೂಪಾಯಿಯನ್ನು ಅವರಿಗೆ ಕಮಿಷನ್ ಕೊಟ್ಟಿದ್ದೇನೆಂದು ಹೇಳಿ ಸಿ.ಓ.ಡಿ ಮುಂದೆ ವರದಿಯನ್ನು ಕೊಟ್ಟಿರುವಂತಹ ದಾಖಲೆ ನನ್ನ ಹತ್ತಿರ ಇದೆ.

ಅಧ್ಯಕ್ಷರು:- ತಾವು ಇದೇ ರೀತಿ ಮಾತನಾಡಿಕೊಂಡು ಹೋದರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಬರಲಿ, ಆಮೇಲೆ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸಮಗ್ರವಾದಂತಹ ತನಿಖೆಯಾಗಬೇಕಾಗಿದೆ. ಅವರನ್ನು ಬಂಧನ ಮಾಡಬೇಕಾಗಿದೆ. ಸುಮಾರು 100 ಕೋಟಿ ರೂಪಾಯಿಯ ಅವ್ಯವಹಾರ ನಡೆದಿದೆ.

ಅಧ್ಯಕ್ಷರು :- ಈ ಯಾವುದು ಕಡತದಲ್ಲಿ ಹೋಗುವುದಿಲ್ಲ. ಈ ವಿಷಯದ ಬಗ್ಗೆ ನಾನು ನಿರ್ಣಯವನ್ನು ತೆಗದುಕೊಂಡಿದ್ದೇನೆಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸಿ.ಓ.ಡಿ. ವರದಿಯನ್ನು ಈ ಸಭೆಯ ಮುಂದೆ ಇಟ್ಟು ಇವತ್ತು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಬಂಧಿಸಬೇಕಾಗಿದೆ.

ಅಧ್ಯಕ್ಷರು :- ತಾವು ಇದೇ ರೀತಿ ಮಾತನಾಡುವುದಾದರೆ ಯಾವುದೂ ಕಡತದಲ್ಲಿ ಹೋಗುವುದಕ್ಕೆ ಆಸ್ಪದವನ್ನು ಕೊಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬರಲಿ, ತಮ್ಮ ಅದರ ವರದಿ ಏನು ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ನಿನ್ನೆಯೇ ಪ್ರಸ್ತಾಪ ಮಾಡಿದ್ದೇನೆ. ನನ್ನ ನಿಲುವಳಿ ಸೂಚನೆಯನ್ನು ತಾವು ತಡೆ ಹಿಡಿದಿದ್ದೀರಿ, ಸರ್ಕಾರಕ್ಕೆ ಆ ಇಂಟೆರೀಯಮ್ ಆರ್ಡರ್ ಬಂದಿದೆಯೋ ಅಥವಾ ಇಲ್ಲವೋ ಎಂದು ಹೇಳಲಿ.

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳವರು ಬರಲಿ, ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಶಿವಮೊಗ್ಗದಲ್ಲಿ ಮನೆಯನ್ನು ಕಟ್ಟಿ ಕೊಡುವುದರಲ್ಲಿ ಅವ್ಯವಹಾರ ನಡೆದಿದೆ. ಸೈಟನ್ನು ಕೊಡುವುದರಲ್ಲಿಯೂ ಅವ್ಯವಹಾರ ನಡೆದಿದೆ. ಗುತ್ತಿಗೆಯನ್ನು ಕೊಡದೆ ಇದ್ದವನನ್ನು ಕರೆಯಿಸಿ, ಅವನಿಗೆ ಗುತ್ತಿಗೆಯನ್ನು ಕೊಡಿಸಿದುದ್ದನ್ನು ಕೊಟ್ಟಿರುವ ದಾಖಲೆ ಇದರಲ್ಲಿ ಇದೆ. ಈ ರೀತಿ ಒಬ್ಬ ಅಧ್ಯಕ್ಷರಾಗಿ ತಮ್ಮ ಕರ್ತವ್ಯದಲ್ಲಿ ಲೋಪಮಾಡಿದ್ದಾರೆ.

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಮುಖ್ಯಮಂತ್ರಿಯವರು ಬರಲಿ, ನಾನು ನಿನ್ನೆ ಇದರ ಬಗ್ಗೆ ಅವರಿಗೂ ತಿಳಿಸಿದ್ದೇನೆ. ಅವರು ಏನು ಹೇಳುತ್ತಾರೆ ಅದನ್ನು ನಾವು ಕೇಳೋಣ. ತಾವು ಇವತ್ತು ಅದನ್ನು ಮತ್ತೆ ಪುನಃ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೀರೊ ನನಗೆ ಅರ್ಥವಾಗುತ್ತಿಲ್ಲ. ನಾನು ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ. ಅವರು ಬಂದು ಹೇಳುತ್ತಾರೆ. ಸಿ.ಓ.ಡಿ. ರಿಪೋರ್ಟ್ ಬಂದಿದೆಯೋ ಏನೋ ಅಥವಾ ಅದರ ಬಗ್ಗೆ ಅವರು ಏನು ಮಾಡುತ್ತಾರೆಂದು ಬಂದು ಹೇಳುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಉತ್ತರವನ್ನು ಕೊಡುತ್ತಾರೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ :- ಇದು ನಿನ್ನೆಯ ದಿವಸ ಪ್ರಸ್ತಾಪವಾಗಿರುವಂಥದ್ದು ನೂರಾರು ಕೋಟಿ ರೂಪಾಯಿ ಲೂಟಿಯಾಗಿರಬೇಕಾದರೆ, ಇದರ ಬಗ್ಗೆ ಸರ್ಕಾರ ಏನು ಮಾಡುತ್ತಿದೆ. ನಾನು ಗೃಹಮಂಡಳಿಯ ಸದಸ್ಯರ ಜೊತೆಗೆ ಮಾಜಿಗೃಹಮಂಡಳಿಯ ಅಧ್ಯಕ್ಷರ ಕಛೇರಿಗೆ ಹೋಗುತ್ತಿದ್ದೇನೆ. ದಾಖಲೆಗಳು ಅವರ ಮನೆಯಲ್ಲಿದೆ ಎಂದು ನನಗೆ ಸುದ್ದಿ ಬಂದಿದೆ. ನನ್ನ ಹತ್ತಿರ ಕೆಲವು ಪುರಾವೆಗಳು ಇದೆ. ಆದ್ದರಿಂದ ಸಂಬಂಧ ಪಟ್ಟವರನ್ನು ಬಂಧನ ಮಾಡಬೇಕಾಗಿದೆ. ಅವರ ಆಸ್ತಿಪಾಸ್ತಿಗಳನ್ನು ಸೀಜ್ ಮಾಡಬೇಕಾಗಿದೆ.

ಅಧ್ಯಕ್ಷರು :- ತಾವು ಈ ರೀತಿ ಪ್ರಸ್ತಾಪ ಮಾಡುವುದು ಸರಿಯಲ್ಲವೆ ಅಲ್ಲ. ಇದಕ್ಕೆ ಯಾವುದಕ್ಕೂ ಆಸ್ಪದ ಕೊಡುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕು ಅಂಥ ಅಕ್ಷಮ್ಯ ಅಪರಾಧವನ್ನು ಮಾಡಿದ್ದಾರೆ. ಜನರ ಮುಂದೆ ಕ್ಷಮಾಪಣೆಯನ್ನು ಕೇಳಬೇಕಾಗಿದೆ.

(ಗೊಂದಲ)

ಅಧ್ಯಕ್ಷರು :- ಶ್ರೀ ಯಡಿಯೂರಪ್ಪನವರೇ, ಆ ಪ್ರಸ್ತಾವನೆ ಏನೂ ಬಂದಿಲ್ಲ. ಇಲ್ಲಿತಮಗೆ ಏನು ಬೇಕೊ ಅದನ್ನು ಹೇಳುತ್ತಿದ್ದೀರಿ ಅದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಇವರಿಗೆ ಸಿ.ಓ.ಡಿ ಅಧಿಕಾರಿಗಳು ಅವರನ್ನು ಬಂಧಿಸಬೇಕು.

(ಗೊಂದಲ)

ಅಧ್ಯಕ್ಷರು :- ಇಲ್ಲ ಅದು ಕಡತದಲ್ಲಿ ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ. ತಾವು ಸದಸ್ಯರ ಮೇಲೆ ಹೀಗೆ ಆರೋಪ ಮಾಡುವುದು ಸರಿಯಲ್ಲ. ಮುಖ್ಯಮಂತ್ರಿಗಳು ಬರಲಿ ಎಂದು ನಾನು ಹೇಳಿದ್ದೇನೆ. ನಿನ್ನೆ ವಿಷಯವನ್ನು ತಾವು ಹೇಳಿದ್ದೀರಿ, ಈಗ ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ :- ನಿನ್ನೆ ದಿನವಿಡೀ ಧರಣಿ ಕುಳಿತಿದ್ದೇವೆ. ಇವತ್ತು ಮತ್ತೆ ಮುಂದುವರೆಸುತ್ತಿದ್ದೇವೆ. ಸರ್ಕಾರದ ಧೋರಣೆ ಏನು ಎಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಅಲ್ಲಿ ಅವ್ಯವಹಾರ ನಡೆದಿದ್ದರೂ ಸರ್ಕಾರ ಸುಮ್ಮನೆ ಇದೆ. ಇದರ ಬಗ್ಗೆ ಸಮಗ್ರವಾಗಿ ಸಿ.ಓ.ಡಿ. ತನಿಖೆಯಾಗಬೇಕು.

ಅಧ್ಯಕ್ಷರು :- ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಶ್ರೀ ಯಡಿಯೂರಪ್ಪನವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನಾವು ಸಹ ನಿನ್ನೆ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಮುಖ್ಯಮಂತ್ರಿಗಳು ಅಲ್ಲಿ ಇವತ್ತು ಏನು ನಡೆದಿದೆ ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಆ ವಿಷಯದ ಬಗ್ಗೆ ವಿಶ್ವಾಸ ತೆಗೆದುಕೊಳ್ಳಬೇಕು. ಏನಾಗಿದೆ ಎಂಬುದನ್ನು ಹೇಳಬೇಕು. ಅದನ್ನು ನಾವು ಈಗಾಗಲೇ ಹೇಳಿದ್ದೇವೆ. ಈಗ ಶ್ರೀ ಯಡಿಯೂರಪ್ಪನವರು ಹೇಳುತ್ತಿದ್ದಾರೆ, ಕ್ಷಮೆ ಕೇಳಬೇಕು ಎಂದು, ಕ್ಷಮೆ ಕೇಳಿದರೆ ಮುಗಿಯುತ್ತದೆಯೇ? ಹಾಗೆ ಮುಗಿಯುವುದಿಲ್ಲ. ಇದಕ್ಕೆ ಯಾರು ಜವಾಬ್ದಾರರು, ಎಷ್ಟೆಷ್ಟು ಅವ್ಯವಹಾರಗಳು ನಡೆದಿವೆ. ಅದು ಸಣ್ಣದು ಇರಲಿ ದೊಡ್ಡದು ಇರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮುಖ್ಯಮಂತ್ರಿಗಳು ಬಂದ ನಂತರ ತಾವು ಅವರಿಗೆ ಇದರ ಬಗ್ಗೆ ಸಂಜೆಯೊಳಗೆ ಏನು ಇದೆ ಎಂಬ ಮಾಹಿತಿಯನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಗಳು ಇವತ್ತಿನಿಂದ ಕನ್ನಡ ಭಾಷೆಯನ್ನು ಎಲ್ಲಾ ಹಂತದಲ್ಲೂ ನಾವು ಜಾರಿಗೆ ತರುತ್ತೇವೆಂದು ಹೇಳಿದರು. ಇವತ್ತು 'ಏಪ್ರಿಲ್ ಫೂಲ್'

ಎಂದು ಫೂಲ್ ಮಾಡುವುದಕ್ಕೆ ನಾಡಿನ ಜನರಿಗೆ ಏನಾದರೂ ಹೇಳಿದ್ದಾರೋ ಏನೋ! ನಿಜವಾಗಿ ಅವರು ಇಂಪ್ಲಿಮೆಂಟ್ ಮಾಡುವ ದೃಷ್ಟಿಯಿಂದ ಹೇಳಿದ್ದಾರೋ ಅಥವಾ ಇಲ್ಲವೋ ನಮಗೆ ಗೊತ್ತಾಗುತ್ತಿಲ್ಲ. ಅವರು ಏನು ಹೇಳಿದರು, ಏಪ್ರಿಲ್ ಒಂದನೇ ತಾರೀಖು ಎಂದು ಹೇಳಿದರು. ಏಪ್ರಿಲ್ ಒಂದನೇ ತಾರೀಖು ಎಂದು ''ಏಪ್ರಿಲ್ ಫೂಲ್'' ಮಾಡುವುದಿದ್ದರೆ ಹಾಗೆ ನಾಡಿನ ಜನರಿಗೆ ಫೂಲ್ ಮಾಡುವುದಕ್ಕೆ ಹೇಳಿದ್ದಾರೊ ಅಥವಾ ನಿಜವಾಗಿ ಅವರು ಮಾಡಬೇಕು ಎಂಬುದು ಇದೆಯೋ ನಮಗೆ ಗೊತ್ತಾಗುತ್ತಿಲ್ಲ. ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬಹಳಷ್ಟು ಸಂದರ್ಭಗಳಲ್ಲಿ ನೋಡಿದ್ದೇನೆ; ಬಹಳಷ್ಟು ಸ್ಟೇಟ್‌ಮೆಂಟ್‌ಗಳನ್ನು ಮಾಡುತ್ತಿದ್ದಾರೆ. ಆದರೆ ಅದು ಯಾವುದೂ ಇಂಪ್ಲಿಮೆಂಟ್ ಆಗುತ್ತಿಲ್ಲ. ಇದು ಬಹಳಷ್ಟು ಇದೆ. ಆ ವಿಷಯಗಳ ಬಗ್ಗೆ ನಾವು ಹೇಳುತ್ತೇವೆ. ಮುಖ್ಯಮಂತ್ರಿಗಳು ಸಹ ಈ ವಿಷಯದ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗಿದೆ. ಕನ್ನಡವನ್ನು ಏಕೆ ಇವತ್ತಿನಿಂದಲೇ ಜಾರಿಗೆ ತರುವುದಕ್ಕೆ ಆಗಲಿಲ್ಲ? ಇವತ್ತು ಅವರೇ ಹೇಳಿದ ಹಾಗೆ ಮುಖ್ಯಮಂತ್ರಿಗಳ ಕಛೇರಿಯ ಮೇಲೆ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಯಲ್ಲೂ ಬೋರ್ಡ್ ಇದೆ. ಅದನ್ನು ಅವರು ತೆಗೆಸಬೇಕಾಗಿತ್ತು. ಈ ಕೆಲಸವನ್ನು ವಿಧಾನಸೌಧದಿಂದಲೇ ಪ್ರಾರಂಭ ಮಾಡಬೇಕಾಗಿತ್ತು. ಆ ಕೆಲಸವನ್ನು ಅವರು ಮಾಡಲಿಲ್ಲ. ಶ್ರೀ ವಾಟಾಳ್ ನಾಗರಾಜ್ ಏನು ಪ್ರಸ್ತಾಪ ಮಾಡಿದರು, ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಅದನ್ನು ಜಾರಿಗೆ ತರಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಏಕೆ ಜಾರಿಗೆ ತರಲಿಲ್ಲ. ಅದರ ಬಗ್ಗೆ ಅವರು ಕ್ಷಮೆ ಕೇಳಬೇಕೆಂದು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ವಿಷಯ (2) ಏಪ್ರಿಲ್ 1ನೇ ತಾರೀಖಿನಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಣೆ ಮಾಡಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಕನ್ನಡವನ್ನು ಜಾರಿಗೆ ತರುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಾಗಿ ಬದ್ಧರಾಗಿದ್ದಾರೆ. ಅವರ ಬಗ್ಗೆ ನನಗೆ ವಿಶ್ವಾಸವಿದೆ. ಅವರು ಹೇಳಿದ ಹಾಗೆ ನಡೆದುಕೊಳ್ಳಬೇಕಾಗಿದೆ. ನಾವು ಶ್ರೀ ವಾಟಾಳ್ ನಾಗರಾಜ್ ಅವರ ಹಿಂದೆ ಹೋಗಿ ಬ್ರಷ್ ತೆಗೆದುಕೊಂಡು ಬಣ್ಣ ಬಳಿಯುವುದಕ್ಕೆ ಸಿದ್ಧರಿಲ್ಲ. ಏಕೆಂದರೆ ಇದು ಒಂದು ಬೋರ್ಡ್‌ನ ಪ್ರಶ್ನೆಯಲ್ಲ, ಪ್ರಶ್ನೆಯಿರುವುದು ಪ್ರಮಾಣಿಕವಾಗಿ ಕನ್ನಡವನ್ನು ಎಲ್ಲ ರಂಗಗಳಲ್ಲೂ ಜಾರಿಗೆ ತರುವುದಕ್ಕೆ ಕಳಕಳಿ ಇದೆಯೋ ಅಥವಾ ಇಲ್ಲವೋ ಎನ್ನುವುದು. ಅನೇಕ ವರ್ಷಗಳಿಂದ ಇಂಥ ಆಶ್ವಾಸನೆಗಳನ್ನು ಕೊಟ್ಟುಕೊಂಡು ಬರುತ್ತಿದ್ದೇವೆ. ಇದಕ್ಕೆ ಮಂಗಳ ಹಾಡಿ ಅದನ್ನು ಜಾರಿಗೆ ತರುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಕನ್ನಡ ನಾಡಿನ ಜನ ಇವತ್ತು ಇದನ್ನು ಜಾರಿಗೆ ತರಬಹುದು ಎಂದು ತಿಳಿದುಕೊಂಡಿದ್ದಾರೆ. ಎಲ್ಲ ರಂಗದಲ್ಲೂ ಹೀಗೇಕೆ ಆಗುತ್ತಿದೆಯೋ ನನಗೆ ಗೊತ್ತಿಲ್ಲ. ಇವತ್ತು ನೌಕರಿ ಇರಬಹುದು, ಅಥವಾ ಮತ್ತೊಂದು ವಿಚಾರದಲ್ಲಿ ಇರಬಹುದು. ಜನರಿಗೆ ಆಧ್ಯತೆ ಸಿಗದೆ ಓಡಾಡುತ್ತಾ ಇರುವಂಥ ಸಂದರ್ಭ ಇದೆ. ನಾನು ಇಂಗ್ಲೀಷ್ ಬೋರ್ಡನ್ನು ವಿರೋಧ ಮಾಡುತ್ತಿಲ್ಲ. ಆದರೆ ಅದರ ಪಕ್ಕದಲ್ಲೇ ಕನ್ನಡ ಬೋರ್ಡ್ ಇರಬೇಕಾದುದು ಅನಿವಾರ್ಯ ತಾನೇ. ಈ ಸದನದಲ್ಲಿ ತಾವು ಅನೇಕ ಸಾರಿ ಹೇಳಿದ್ದೀರಿ. ಅಧಿಕಾರಿಗಳು ಕೊಡುವಂತಹ ವಿಚಾರವಲ್ಲ ಇಂಗ್ಲೀಷ್‌ನಲ್ಲೇ ಇರುತ್ತದೆ ಎಂದು ಅನೇಕ ಜನಕ್ಕೆ ಕನ್ನಡ ಭಾಷೆಯ ಪರಿಜ್ಞಾನವಿಲ್ಲ ಎಂದು ಆಯಿತು. ಇವತ್ತು ವಿಧಾನ ಸೌಧದಲ್ಲಿ ಇಂಗ್ಲಿಷ್ ಬೋರ್ಡ್ ಇದ್ದರೆ ಅದರ ಪಕ್ಕದಲ್ಲೇ ಕನ್ನಡ ಬೋರ್ಡ್ ಇರಲೇ ಬೇಕೆಂದು ತಾವು ಕಡ್ಡಾಯಮಾಡಿ. ಅದನ್ನು ಸರ್ಕಾರ ಜಾರಿಗೆ ತರಬೇಕು. ಮೊದಲು ಇಲ್ಲಿ ಎಲ್ಲ ಹಂತದಲ್ಲೂ ಕನ್ನಡವನ್ನು ಜಾರಿಗೆ ತರಬೇಕು. ಕರ್ನಾಟಕ ರಾಜ್ಯದಲ್ಲಿ ಇವತ್ತಿನಿಂದಲಾದರೂ ಹೊಸ ಅಧ್ಯಾಯ ಪ್ರಾರಂಭವಾಗಲಿ. ಈ ನಾಡಿನ ಜನತೆಗೆ ಎಲ್ಲ ಕ್ಷೇತ್ರದಲ್ಲಿ ಆದ್ಯತೆ ಸಿಗಬೇಕು. ಇದು ಉದ್ಯೋಗ ಇರಬಹುದು. ಅಥವಾ ಬೇರೆ ಬೇರೆ ಕೆಲಸ ಕಾರ್ಯಗಳಲ್ಲಿ ಇರಬಹುದು. ಕಾರ್ಖಾನೆ ನಡೆಸುವುದರಲ್ಲಿ ಇರಬಹುದು. ಹೊರಗಿನವರಿಗೆ ಆದ್ಯತೆ ಸಿಗಬಾರದು ಎಂದು ನಾನು